73543б/2019/ಕ೫ಎ
20/09/2019

*ನವೀನ್ ರಾಜ್ ಸಿಂಗ್, ಭಾ.ಆ.ಸೇ.*

ಸರ್ಕಾರದ ಕಾರ್ಯದರ್ಶಿಗಳು & ವ್ಯವಸ್ಥಾಪಕ ನಿರ್ದೇಶಕರು

ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)

---

ಸಂಖ್ಯೆ. ಕೆಎಸ್ಎಂಸಿಎಲ್:ಆಪ್ತ ಶಾಖೆ:2019–20/1499 ದಿನಾಂಕ 19.09.2019

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
(ಆಡಳಿತ ಸುಧಾರಣೆ)
ಬಹುಮಹಡಿ ಕಟ್ಟಡ
ಬೆಂಗಳೂರು.

ಮಾನ್ಯರೇ,

ವಿಷಯ: ಹಾಸನ ಜಿಲ್ಲೆ ಪ್ರವಾಹ/ಅತಿವೃಷ್ಟಿ ಹಾಗೂ ಇತರೆ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿರುವ ಬಗ್ಗೆ.

******

ಹಾಸನ ಜಿಲ್ಲೆಯ ಪ್ರವಾಹ/ಅತಿವೃಷ್ಟಿ ಹಾಗೂ ಇತರೆ ಇಲಾಖೆಗಳ ಪ್ರಗತಿ ಕುರಿತು ದಿನಾಂಕ 23.03.2019 ರಂದು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯ ನಡವಳಿಯನ್ನು ತಮ್ಮ ಮಾಹಿತಿಗಾಗಿ ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಹಾಸನ ಜಿಲ್ಲೆ ಉಸ್ತುವಾರಿ ಕಾರ್ಯದರ್ಶಿಗಳು
ಹಾಗೂ
ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಎಂಸಿಎಲ್

32
20/9/19

**ಶ್ರೀ ನವೀನ್ ರಾಜ್ ಸಿಂಗ್, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಿನರಲ್ಸ್ ಕಾರ್ಪೋರೇಷನ್ ಲಿ. ಬೆಂಗಳೂರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 13-08-2019 ರಂದು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಪ್ರವಾಹ/ಅತಿವೃಷ್ಟಿ ಹಾಗೂ ಇತರೆ ಇಲಾಖೆಗಳ ಪ್ರಗತಿ ಪರಿಶೀಲನಾ ಸಭಾ ನಡವಳಿ.**

*****

**ಹಾಜರಾತಿ: ಹಾಜರಾತಿ ವಹಿಯಲ್ಲಿರುವಂತೆ**

ಮಾನ್ಯ ಜಿಲ್ಲಾಧಿಕಾರಿಗಳು ಸಭೆಗೆ ಆಗಮಿಸಿದ್ದ ಸಭಾಧ್ಯಕ್ಷರನ್ನು, ಗಣ್ಯರನ್ನು, ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಸಭಾಧ್ಯಕ್ಷರನ್ನು ಕೋರಿದರು.

- ಮಾನ್ಯ ಜಿಲ್ಲಾಧಿಕಾರಿಗಳು ಮಾನ್ಯ ಸಭಾಧ್ಯಕ್ಷರು ಹಾಗೂ ಸಭೆಗೆ ಜಿಲ್ಲೆಯಲ್ಲಿ ಉಂಟಾಗಿರುವ ಪ್ರವಾಹ/ಅತಿವೃಷ್ಟಿ ಪರಿಸ್ಥಿತಿ ಹಾಗೂ ಮಳೆ ವಿವರ ಮಳೆ ಹಾನಿಗಳು ಪರಿಹಾರ ಕಾರ್ಯಾಚರಣೆಗಳ ಬಗ್ಗೆ ಅವಲೋಕಿಸಲು ಕೋರುತ್ತಾ ಪ್ರಾತ್ಯಕ್ಷತೆ ಮೂಲಕ ವಿವರಿಸಿದರು.

- ಮಾನ್ಯ ಸಭಾಧ್ಯಕ್ಷರು ಮಳೆ ವಿವರ ಪ್ರಸ್ತಾಪಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ಮಳೆ ವಿವರಗಳನ್ನು ವಿವರಿಸುತ್ತಾ, ಜಿಲ್ಲೆಯಲ್ಲಿ ವಾಡಿಕೆ ಮಳೆಗಿಂತ ಮೇ, ಜೂನ್, ಜುಲೈ ಮಾಹೆಗಳಲ್ಲಿ ಕಡಿಮೆ ಪ್ರಮಾಣದ ಮಳೆಯಾಗಿರುತ್ತದೆಂದು ಕಳೆದ 05 ದಿನಗಳಲ್ಲಿ ಶೇ.728 ರಷ್ಟು ಅಧಿಕ ಮಳೆಯಾಗಿರುತ್ತದೆ ಎಂದು ಮಾಹಿತಿ ನೀಡಿದರು.

- ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ನೇತೃತ್ವದಲ್ಲಿ ತುರ್ತು ಪರಿಹಾರ ಕಾರ್ಯಾಚರಣೆಗಳ ತಂಡಗಳನ್ನು ರಚಿಸಿರುವುದಾಗಿ ನೋಡಲ್ ಅಧಿಕಾರಿಗಳನ್ನು ನಿಯೋಜಿಸಿರುವುದಾಗಿ ತಿಳಿಸಿದರು. ಜಿಲ್ಲಾ ಪಂಚಾಯತ್, ಅರಣ್ಯ ಇಲಾಖೆ, ಪೊಲೀಸ್ ಇಲಾಖೆ ಅಗ್ನಿಶಾಮಕ ಇಲಾಖೆಗಳ ಸಹಭಾಗಿತ್ವದಲ್ಲಿ ತುರ್ತು ಪರಿಹಾರ ಕಾರ್ಯಾಚರಣೆಗಳ ತಂಡಗಳನ್ನು ರಚಿಸಿ ಗ್ರೂಪ್ ಟೀಮ್ ಮಾಡಿರುವುದಾಗಿಯೂ, ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರು, ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಗಳ ತಂಡ ಹಾಗೂ ಗ್ರಾಮ ಪಂಚಾಯತಿ ಮಟ್ಟದಲ್ಲಿ ಕಂದಾಯ ನಿರೀಕ್ಷಕರು, ಗ್ರಾಮಲೆಕ್ಕಿಗರು, ಗ್ರಾಮ ಪಂಚಾಯ್ತಿ ಕಾರ್ಯದರ್ಶಿಗಳ ಟೀಮ್ ಮಾಡಿ Whatsapp group ಮಾಡಿರುವುದಾಗಿಯೂ ಯಾವುದೇ ಅಹಿತಕರ ಘಟನೆ ಸಂಭವಿಸಿದ ತಕ್ಷಣದಲ್ಲಿ ಮಾಹಿತಿಗಳನ್ನು Whatsapp group, gmail ಗೆ ರವಾನಿಸಲಾಗುತ್ತಿದೆಯೆಂದು ಸಂಬಂಧಿಸಿದ ತಂಡವು ತಕ್ಷಣದಲ್ಲಿ ಪರಿಹಾರ ಕಾರ್ಯಾಚರಣೆಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳುತ್ತಿರುವುದಾಗಿ ತಿಳಿಸಿದರು. ಈ ರೀತಿಯಾಗಿ ಕಳೆದ ಒಂದು ವಾರದಿಂದ ಮುಂಜಾಗ್ರತಾ ಕ್ರಮಗಳನ್ನು ಜಿಲ್ಲಾಡಳಿತ ವತಿಯಿಂದ ಕೈಗೊಳ್ಳಲಾಗಿದೆಯೆಂದು ಜಿಲ್ಲೆಯ ಸಂಬಂಧಿಸಿದ ತಹಶೀಲ್ದಾರರುಗಳು ಉಪವಿಭಾಗಾಧಿಕಾರಿಗಳು ಹಾಸನ/ಸಕಲೇಶಪುರ ರವರ ಉಸ್ತುವಾರಿಯಲ್ಲಿ 24 ಗಂಟೆಗಳು ಸತತವಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆಂದು ಸಭೆಗೆ ಮಾಹಿತಿ ನೀಡಿದರು.

- ಸರ್ಕಾರಿ ಕಚೇರಿಗಳಲ್ಲಿ ಬಿಎಸ್‌ಎನ್‌ಎಲ್ ಸಂಸ್ಥೆಯಿಂದ ದೂರವಾಣಿಗಳನ್ನು ಅಳವಡಿಸಿದ್ದು ನೆಟ್ ವರ್ಕ್ ಸಮಸ್ಯೆ ಉಂಟಾಗುವುದರಿಂದ ದೂರವಾಣಿ ಸಂಪರ್ಕಕ್ಕೆ ಅಡಚಣೆ ಉಂಟಾಗುವ ಸಾಧ್ಯತೆ ಇರುವುದರಿಂದ ಬಿಎಸ್‌ಎನ್‌ಎಲ್ ಸಂಸ್ಥೆಯವರಿಗೆ ಎಸ್.ಡಿ.ಆರ್.ಆಫ್/

ಎನ್.ಡಿ.ಆರ್.ಎಫ್. ಅನುದಾನದಲ್ಲಿ ಸದರಯವರಿಗೆ ಅಗತ್ಯವಿರುವ ಡೀಸೆಲ್ ನೀಡಲಾಗುತ್ತಿದ್ದು ಎಲ್ಲಾ ಪ್ರದೇಶಗಳಲ್ಲೂ ಸಂಪರ್ಕಕ್ಕೆ ತೊಂದರೆಯಾಗದಂತೆ ಗಮನಹರಿಸಲು ಸೂಚಿಸಿರುವುದಾಗಿಯು, ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಕಂಟ್ರೋಲ್ ರೂಮ್‌ಗಳು 24 ಗಂಟೆಯು ಕಾರ್ಯ ನಿರ್ವಹಿಸುತ್ತಿರುವುದಾಗಿಯೂ ಬಿ.ಎಸ್.ಎನ್.ಎಲ್ ನೆಟ್‌ವರ್ಕ್ ಸಂಪರ್ಕ ಸಮಸ್ಯೆ ಉಂಟಾಗುವ ಸಾಧ್ಯತೆ ಇರುವುದರಿಂದ ಸದರಿ ಕಂಟ್ರೋಲ್ ರೂಂ ಮತ್ತು ತಹಶೀಲ್ದಾರರು, ಉಪವಿಭಾಗಾಧಿಕಾರಿಗಳ ವಾಹನಗಳಿಗೆ ಪೊಲೀಸ್ ವೈರ್‌ಲೆಸ್‌ಗಳನ್ನು ಅಳವಡಿಸಲಾಗಿರುವುದರಿಂದ ಹಾಗೂ ಕಂಟ್ರೋಲ್ ರೂಮ್ ದೂರವಾಣಿ ಮತ್ತು ಅಧಿಕಾರಿಗಳ ಮೊಬೈಲ್ ನಂಬರ್‌ಗಳನ್ನು ಸಾರ್ವಜನಿಕರಿಗೆ ಪ್ರಚಾರ ಮಾಡಲಾಗಿದೆಯೆಂದು ಇದರಿಂದ ತುರ್ತಾಗಿ ಸ್ಪಂದಿಸಲು ಹಾಗೂ ಸಂಬಂಧಿಸಿದ ಅಧಿಕಾರಿಗಳು ಸಿಬ್ಬಂದಿಗಳು ತುರ್ತು ಕಾರ್ಯಾಚರಣೆ ಕೈಗೊಳ್ಳುತ್ತಿರುವರೆಂದು ಮಾಹಿತಿ ನೀಡಿದರು. ಜಿಲ್ಲಾಡಳಿತವತಿಯಿಂದ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳಿಂದಾಗಿ ಜಿಲ್ಲೆಯಲ್ಲಿ ಕಡಿಮೆ ಪ್ರಮಾಣದ ಜೀವಹಾನಿ, ಜಾನುವಾರು ಹಾನಿ ಸಂಭವಿಸಿರುವುದಾಗಿ ತಿಳಿಸಿದರು.

- ಜಿಲ್ಲೆಯಲ್ಲಿ ಕ್ರಮವಾಗಿ ಆಲೂರು ತಾ.-1, ಹಾಸನ ತಾ.-1, ಸಕಲೇಶಪುರ ತಾ.-2 ಒಟ್ಟು 4 ಮಾನವ ಜೀವಹಾನಿ ಹಾಗೂ ಜಾನುವಾರು ಹಾನಿ ಆಲೂರು ತಾ-2, ಹಾಸನ ತಾ.-2, ಸಕಲೇಶಪುರ-1 ಒಟ್ಟು 5 ಜಾನುವಾರುಗಳ ಹಾನಿ ಸಂಭವಿಸಿರುತ್ತದೆಂದು ಮಾಹಿತಿ ನೀಡಿದರು. ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ತಕ್ಷಣವೇ ಪರಿಹಾರ ವಿತರಿಸಲು ಕ್ರಮಕೈಗೊಳ್ಳಲು ಸೂಚಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ಈಗಾಗಲೇ ವೈದ್ಯಕೀಯ ವರದಿಯನ್ವಯ ಪರಿಹಾರ ವಿತರಣೆ ಕ್ರಮಕೈಗೊಳ್ಳಲಾಗುತ್ತಿದೆಂದು ತಿಳಿಸಿದರು.

- ಜಿಲ್ಲೆಯಲ್ಲಿ 9 ಸಹಾಯ/ಕಾಳಜಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು ಅರಕಲಗೂಡು ತಾ.-154, ಹೊಳೆನರಸೀಪುರ ತಾ-500, ಸಕಲೇಶಪುರ ತಾ.-134 ಒಟ್ಟು 848 ಸಂತ್ರಸ್ಥ ಕುಟುಂಬಗಳನ್ನು ಸಹಾಯ ಕೇಂದ್ರಗಳಿಗೆ ಸುರಕ್ಷಿತವಾಗಿ ಸ್ಥಳಾಂತರಿಸಲಾಗಿರುತ್ತದೆಂದು ವಿವರಿಸಿದರು. ಜಿಲ್ಲೆಯ 9 ಸಹಾಯ ಕೇಂದ್ರಗಳಲ್ಲಿ ಒಟ್ಟು 1466 ಸಂತ್ರಸ್ಥರು ಆಶ್ರಯ ಪಡೆದುಕೊಂಡಿರುವುದಾಗಿ ಮಾಹಿತಿ ನೀಡಿದರು.

- ಪ್ರವಾಹ/ ಅತಿವೃಷ್ಟಿಯಿಂದ ಜಿಲ್ಲೆಯಲ್ಲಿ ಆಲೂಗಡ್ಡೆ, ತೆಂಗು, ಅಡಿಕೆ, ಬಾಳೆ, ಶುಂಠಿ, ಬೀನ್ಸ್, ಟೊಮ್ಯಾಟೊ ಇತ್ಯಾದಿ ಬೆಳೆಗಳು ಹಾನಿಗೊಳಗಾಗಿದ್ದು ಆಲೂರು ತಾ.ನಲ್ಲಿ 25.54 ಹೆ. ಪ್ರದೇಶದಲ್ಲಿ ರೂ.1.76 ಲಕ್ಷ, ಅರಕಲಗೂಡು ತಾ. 68 ಹೆ. ಗಳಲ್ಲಿ ರೂ.5.4 ಲಕ್ಷ, ಅರಸೀಕೆರೆ ತಾ. 9.3 ಹೆ.ಗಳಲ್ಲಿ ರೂ.0.90 ಲಕ್ಷ, ಬೇಲೂರು ತಾ. 483.4 ಹೆ.ಗಳಲ್ಲಿ ರೂ.17.33 ಲಕ್ಷ, ಚನ್ನರಾಯಪಟ್ಟಣ ತಾ. 388 ಹೆ.ಗಳಲ್ಲಿ ರೂ.26.78 ಲಕ್ಷ, ಹಾಸನ ತಾ. 1164 ಹೆ.ಗಳಲ್ಲಿ ರೂ.79.46 ಲಕ್ಷ, ಹೊಳೆನರಸೀಪುರ ತಾ.154.8 ಹೆ.ಗಳಲ್ಲಿ ರೂ.9.45 ಲಕ್ಷ ಮತ್ತು ಸಕಲೇಶಪುರ ತಾ. 500 ಹೆ.ಗಳಲ್ಲಿ ರೂ.9.75 ಲಕ್ಷ ಒಟ್ಟು ಜಿಲ್ಲೆಯಲ್ಲಿ 2793.045 ಹೆಕ್ಟೇರ್ ಪ್ರದೇಶಗಳಲ್ಲಿ ರೂ.150.93 ಲಕ್ಷಗಳು ಹಾನಿಗೊಳಗಾಗಿರುತ್ತದೆ.

- ಪ್ರವಾಹ/ ಅತಿವೃಷ್ಟಿಯಿಂದ ಶಿಥಿಲಗೊಂಡ ಮನೆಗಳು ಭಾಗಶ:/ಪೂರ್ಣವಾಗಿ ಬಿದ್ದ ಮನೆಗಳು ಕ್ರಮವಾಗಿ ಆಲೂರು ತಾ.-7, ಅರಕಲಗೂಡು ತಾ-39, ಬೇಲೂರು ತಾ.-43, ಹಾಸನ ತಾ-49, ಹೊಳೆನರಸೀಪುರ ತಾ-91, ಸಕಲೇಶಪುರ ತಾ-4, ನಗರಸಭೆ ಹಾಸನ ವ್ಯಾಪ್ತಿ-187, ಪುರಸಭೆ